For More Job-News Visit: www.kpscvaani.com

ಬೆಂಗಳೂರು
ಭೂಮಿ ಬ್ಯಾಂಕ್ ಕಟ್ಟಡ
ಟಿಪ್ಪು ಸುಲ್ತಾನ್ ಅರಮನೆ ರಸ್ತೆ,
ಚಾಮರಾಜಪೇಟೆ,
ಬೆಂಗಳೂರು - 18.

## ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನೌಕರರ ಸಾಮಾನ್ಯ ಶ್ರೇಣಿ ಸಮಿತಿ ಕಾರ್ಯಾಲಯ,

ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018.

ಪ್ರಕಟಣೆ ಸಂಖ್ಯೆ: ಸಾಶ್ರೇಸಕಾ/ಬ್ಯಾ.ನೇ.ನೇ.ಪ್ರಕಟಣೆ/1427/2019–20. ದಿನಾಂಕ:13–03–2020.

### –: ಬ್ಯಾಕ್‌ಲಾಗ್ ನೇಮಕಾತಿ ಪ್ರಕಟಣೆ :–

ರಾಜ್ಯದಲ್ಲಿನ ಪಿಕಾರ್ಡ್ ಬ್ಯಾಂಕುಗಳಿಗೆ ಈ ಕೆಳಗಿನ ಬ್ಯಾಕ್‌ಲಾಗ್ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಲುವಾಗಿ ಅರ್ಹ ಅಭ್ಯರ್ಥಿಗಳಿಂದ ತಾಕ್ಷಣಿಕ ಸೇವೆ (online) ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವರ್ಗವಾರು/ಮೀಸಲಾತಿವಾರು ನೇಮಕಾತಿ ವಿವರ: ಸಂಕ್ಷೇಪಣಾ : ಸಾ=ಸಾಮಾನ್ಯ, ಮ=ಮಹಿಳಾ, ಗ್ರಾ=ಗ್ರಾಮೀಣ, ಅಂ.ವಿ=ಅಂಗವಿಕಲರು, ಮಾ.ಸೈ=ಮಾಜಿ ಸೈನಿಕರು, ವೇ.ಶ್ರೇ=ವೇತನ ಶ್ರೇಣಿ, ನಿ=ನಿಯಮಾನುಸಾರ.

| ಕ್ರ.ಸಂ | ಹುದ್ದೆಯ ಹೆಸರು ಹಾಗೂ ವೇತನ ಶ್ರೇಣಿ | ಪರಿಶಿಷ್ಟ ಜಾತಿ | | | | | | ಪರಿಶಿಷ್ಟ ಪಂಗಡ | | | | ಕನಿಷ್ಠ ವಿದ್ಯಾರ್ಹತೆ |
|---|---|---|---|---|---|---|---|---|---|---|---|---|
| | | ಸಾ. | ಮ.. | ಗ್ರಾ. | ಮಾ.ಸೈ | ಅಂ. ವಿ. | ಒಟ್ಟು | ಸಾ. | ಮ. | ಗ್ರಾ. | ಒಟ್ಟು | |
| 1 | ಲೆಕ್ಕಾಧಿಕಾರಿ–05<br>ವೇ.ಶ್ರೇ.<br>ರೂ.17650–32000<br>+ನಿ ಇತರೆ ಭತ್ಯೆಗಳು | 01 | 01 | – | 01 | 01 | **04** | – | 01 | – | **01** | ಅಂಗೀಕೃತ ವಿಶ್ವವಿದ್ಯಾನಿಲಯದ ಬಿ.ಕಾಂ/ಬಿ.ಬಿ.ಎಂ/ ಬಿ.ಬಿ.ಎ/ಬಿ.ಸಿ.ಎ/ಸಹಕಾರದಲ್ಲಿ ಪದವೀಧರರಾಗಿರಬೇಕು. ಟ್ಯಾಲಿ ಸರ್ಟಿಫಿಕೇಟ್‌ನೊಂದಿಗೆ ಗಣಕಯಂತ್ರದ ನಿರ್ವಹಣೆ ಜ್ಞಾನ ಹೊಂದಿರಬೇಕು. (Computer operations & applications) ಕನ್ನಡ ಭಾಷೆಯನ್ನು ಮಾತನಾಡಲು, ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. |
| 2 | ಹಿರಿಯ ಕ್ಷೇತ್ರಾಧಿಕಾರಿ–03<br>ವೇ.ಶ್ರೇ.<br>ರೂ.14550–26700<br>+ನಿ ಇತರೆ ಭತ್ಯೆಗಳು | 02 | – | 01 | – | – | **03** | – | – | – | – | ಅಂಗೀಕೃತ ವಿಶ್ವವಿದ್ಯಾನಿಲಯದ ಪದವೀಧರರಾಗಿರಬೇಕು. ಗಣಕಯಂತ್ರದ ನಿರ್ವಹಣೆ ಜ್ಞಾನ ಹೊಂದಿರಬೇಕು. (Computer operations & applications) ಕನ್ನಡ ಭಾಷೆಯನ್ನು ಮಾತನಾಡಲು, ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. |
| 3 | ಪ್ರ.ದ.ಸಹಾಯಕರು–07<br>ವೇ.ಶ್ರೇ.<br>ರೂ.14550–26700<br>+ನಿ ಇತರೆ ಭತ್ಯೆಗಳು | 01 | 01 | 02 | 01 | 01 | **06** | 01 | – | – | **01** | ಅಂಗೀಕೃತ ವಿಶ್ವವಿದ್ಯಾನಿಲಯದ ಪದವೀಧರರಾಗಿರಬೇಕು. ಕನ್ನಡ ಭಾಷೆಯನ್ನು ಮಾತನಾಡಲು, ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಗಣಕಯಂತ್ರದ ನಿರ್ವಹಣೆ ಜ್ಞಾನ ಹೊಂದಿರಬೇಕು. (Computer operations & applications) |
| 4 | ಕಿರಿಯ .ಕ್ಷೇತ್ರಾಧಿಕಾರಿ–09<br>ವೇ.ಶ್ರೇ.<br>ರೂ.11600–21000<br>+ನಿ ಇತರೆ ಭತ್ಯೆಗಳು | 02 | 01 | 02 | 01 | 01 | **07** | – | 01 | 01 | **02** | ದ್ವಿತೀಯ ಪಿ.ಯು.ಸಿ. ತೇರ್ಗಡೆಯಾಗಿರಬೇಕು. ಕನ್ನಡ ಭಾಷೆಯನ್ನು ಮಾತನಾಡಲು, ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಗಣಕಯಂತ್ರದ ನಿರ್ವಹಣೆ ಜ್ಞಾನ ಹೊಂದಿರಬೇಕು. (Computer operations & applications) |

For More Job-News Visit: www.kpscvaani.com

| | | | | | | | | | | | | |
|---|---|---|---|---|---|---|---|---|---|---|---|---|
| 5 | ಬೆರಳಚ್ಚುಗಾರರು/ಗಣಕ ಯಂತ್ರ ನಿರ್ವಾಹಕರು.-07 ವೇ.ಶ್ರೇ. ರೂ.11600-21000 +ನಿ ಇತರೆ ಭತ್ಯೆಗಳು | 02 | 02 | 02 | - | 01 | 07 | - | - | - | - | ದ್ವಿತೀಯ ಪಿ.ಯು.ಸಿ. ತೇರ್ಗಡೆಯಾಗಿರಬೇಕು. ಅಥವಾ 3 ವರ್ಷಗಳ ಡಿಪ್ಲೋಮಾ ಇನ್ ಕಮರ್ಶಿಯಲ್ ಪ್ರಾಕ್ಟೀಸ್ ತೇರ್ಗಡೆಯಾಗಿರಬೇಕು. ಬೆರಳಚ್ಚಿನಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸೀನಿಯರ್ ತೇರ್ಗಡೆ ಯಾಗಿರಬೇಕು. ಗಣಕಯಂತ್ರದ ನಿರ್ವಹಣೆ ಜ್ಞಾನ ಹೊಂದಿರಬೇಕು. (Computer operations & applications) ಕನ್ನಡ ಭಾಷೆಯನ್ನು ಮಾತನಾಡಲು, ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. |
| 6 | ಸಹಾಯಕರು-04 ವೇ.ಶ್ರೇ. ರೂ.10400-16400 +ನಿ ಇತರೆ ಭತ್ಯೆಗಳು | - | - | 01 | - | - | 01 | 01 | 01 | 01 | 03 | ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ಐಚ್ಛಿಕ ಭಾಷೆಯಾಗಿ ಪಡೆದು ತೇರ್ಗಡೆ ಹೊಂದಿರಬೇಕು. |
| 7 | ಜವಾನರು-13 ವೇ.ಶ್ರೇ. ರೂ.9600-14550 +ನಿ ಇತರೆ ಭತ್ಯೆಗಳು | 02 | 03 | 03 | 01 | 01 | 10 | 02 | 01 | - | 03 | 8ನೇ ತರಗತಿಯಲ್ಲಿ ತೇರ್ಗಡೆ ಹೊಂದಿರಬೇಕು ಹಾಗೂ ಕನ್ನಡ ಭಾಷೆಯ ಜ್ಞಾನ ಇರತಕ್ಕದ್ದು. |
| | ಒಟ್ಟು | 10 | 08 | 11 | 04 | 05 | 38 | 04 | 04 | 02 | 10 | |

**I.ವಯೋಮಿತಿ:** ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಕನಿಷ್ಠ 18 ವರ್ಷ ತುಂಬಿರಬೇಕು ಹಾಗೂ ಗರಿಷ್ಠ 40 ವರ್ಷಗಳು ಮೀರಿರಬಾರದು.

**II.ಅರ್ಜಿ ಶುಲ್ಕ** :- ರೂ.500+ಅಂಚೆ ಸೇವೆ ಶುಲ್ಕ ರೂ.30/-

**ಸೂಚನೆ:-**

(1) ಅರ್ಜಿ ಶುಲ್ಕವನ್ನು ಪಾವತಿಸುವುದಕ್ಕೆ ಕರ್ನಾಟಕ ರಾಜ್ಯದಲ್ಲಿನ ಯಾವುದೇ ವಿದ್ಯುನ್ಮಾನ ಪಾವತಿ ಲಭ್ಯದ (E.Pt) ಅಂಚೆ ಕಚೇರಿಗೆ ತೆರಳಿ ನಿಗದಿತ ಅರ್ಜಿ ಶುಲ್ಕ ಮತ್ತು ಸೇವಾ ಶುಲ್ಕವನ್ನು ಅಧಿಕೃತ ಜಾಲತಾಣ http:recruit-app.com/cccpcardbl2020 ರಲ್ಲಿ ತಿಳಿಸಿರುವಂತೆ ಪಾವತಿ ಮಾಡತಕ್ಕದ್ದು.

(2) ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕವಾದ 17-04-2020 ರ ನಂತರ ಶುಲ್ಕವನ್ನು ಸಂದಾಯ ಮಾಡಲು ಅವಕಾಶ ಇರುವುದಿಲ್ಲ. ಡಿ.ಡಿ/ಪೋಸ್ಟಲ್ ಆರ್ಡರ್/ಎಂ.ಒ. ಅಥವಾ ಇನ್ನಿತರೇ ರೀತಿಯಲ್ಲಿ ಶುಲ್ಕಗಳನ್ನು ಸ್ವೀಕರಿಸಲಾಗುವುದಿಲ್ಲ.

For More Job-News Visit: www.kpscvaani.com

(III) ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕದ ವಿವರ :-

| ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 16-03-2020 | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 16-04-2020 | ಶುಲ್ಕ ಪಾವತಿಸಲು ಕೊನೆಯ ದಿನಾಂಕ: 17-04-2020 |
|---|---|---|

(IV) ಅರ್ಜಿ ಸಲ್ಲಿಸುವ ಮತ್ತು ಆಯ್ಕೆ ವಿಧಾನ ಹಾಗೂ ಇತರೇ ಷರತ್ತುಗಳು ಹಾಗೂ ಹೆಚ್ಚಿನ ವಿವರಗಳಿಗೆ ಅಧಿಕೃತ ವೆಬ್‌ಸೈಟ್ http:recruit-app.com/cccpcardbl2020ನ್ನು ಸಂಪರ್ಕಿಸಿ ಮಾಹಿತಿ ಪಡೆಯತಕ್ಕದ್ದು. **Helpline No. 8861410093** (ಬೆಳಿಗ್ಗೆ 10.00 ರಿಂದ ಸಾಯಂಕಾಲ 6.00 ಗಂಟೆವರೆಗೆ)

**ಸಾಮಾನ್ಯ ಸೂಚನೆಗಳು:**

(1) ತಾಕ್ಷಣಿಕ (ಆನ್‌ಲೈನ್) ಸೇವೆಯ ಮೂಲಕ ಅರ್ಜಿಗಳನ್ನು ಸಲ್ಲಿಸಬೇಕು. ಅಧಿಕೃತ ವೆಬ್‌ಸೈಟ್ (ಜಾಲ ತಾಣ) ನಲ್ಲಿ ಅಪ್ಲಿಕೇಶನ್ ಫಾರಂ ಅಪ್ ಲೋಡ್ ಮಾಡಲಾಗುತ್ತದೆ. ಈ ಪ್ರಕಟಣೆಗನುಗುಣವಾಗಿ ನೇಮಕಾತಿಗೆ ಸಂಬಂಧಿಸಿದ ಎಲ್ಲಾ ವಿಧಾನಗಳ ಕುರಿತು ಮಾಹಿತಿಯನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ (ಜಾಲ ತಾಣ) ಅಪ್‌ಲೋಡ್ ಮಾಡಲಾಗುತ್ತದೆ.

(2) ಬ್ಯಾಕ್‌ಲಾಗ್ ಹುದ್ದೆಗಳನ್ನು ಬ್ಯಾಕ್‌ಲಾಗ್ ನೇಮಕಾತಿ ನಿಯಮಾನುಸಾರ ಆಯ್ಕೆ ಮಾಡಲಾಗುವುದು, ವೈಯಕ್ತಿಕ ಸಂದರ್ಶನವಿರುವುದಿಲ್ಲ.

(3) ಬ್ಯಾಕ್‌ಲಾಗ್ ಹುದ್ದೆಗಳಿಗೆ ವಯೋಮಿತಿ ಕನಿಷ್ಠ 18 ವರ್ಷ ಗರಿಷ್ಠ 40 ವರ್ಷಗಳು ಮೀರಿರಬಾರದು.

(4) ಅರ್ಹತಾದಾಯಕ ಪರೀಕ್ಷೆಯಲ್ಲಿ (qualifying exam) ಗಳಿಸಿದ ಅಂಕಗಳ (ಮೆರಿಟ್) ಆಧಾರದಲ್ಲಿ ಇಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ಒಂದೇ ರೀತಿಯ ಅಂಕಗಳನ್ನು ಪಡೆದಿದ್ದಲ್ಲಿ ಅವರ ಗರಿಷ್ಠ ವಯೋಮಿತಿ ಆಧಾರದ ಮೇಲೆ ಆಯ್ಕೆ ಮಾಡುವುದು. ಪ್ರಕಟಣೆಯಲ್ಲಿ ಪ್ರಕಟಿಸಿದ ಹುದ್ದೆಗಳ ಸಂಖ್ಯೆಗಳಿಗೆ ಸಮನಾದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು.

(5) ಹುದ್ದೆಗಳಿಗೆ ನಿಗದಿಪಡಿಸಿದ ಅರ್ಹತಾದಾಯಕ (ಕನಿಷ್ಠ ವಿದ್ಯಾರ್ಹತೆ) ಪರೀಕ್ಷೆಯಲ್ಲಿ (Qualifying exam) ಎಲ್ಲಾ ಐಚ್ಛಿಕ ವಿಷಯ ಹಾಗೂ ಭಾಷಾ ವಿಷಯ (All subjects including languages) ಮತ್ತು ಎಲ್ಲಾ ಸಾಲುಗಳ ಸೆಮಿಸ್ಟರ್‌ನಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು (ಮೆರಿಟ್ ಲಿಸ್ಟ್) ತಯಾರಿಸಿ ಮೂಲ ದಾಖಲಾತಿಗಳ ಪರಿಶೀಲನೆಗೆ ಕರೆಯಲಾಗುವುದು. ಮೂಲ ದಾಖಲೆಗಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ ಅರ್ಜಿಯೊಂದಿಗೆ ಲಗತ್ತಿಸಿದ ಎಲ್ಲ ಮೂಲ ದಾಖಲಾತಿಗಳನ್ನು ಹಾಜರುಪಡಿಸಬೇಕು. ಒಂದು ವೇಳೆ ಹಾಜರುಪಡಿಸದಿದ್ದಲ್ಲಿ ಅಂತಹ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು. ಸದರಿ ಪರಿಶೀಲನೆಗೆ ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ ಹಾಜರಾಗಬೇಕು. ಯಾವುದೇ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಯನ್ನು ನೀಡಲಾಗುವುದಿಲ್ಲ.

(6) ಅಭ್ಯರ್ಥಿಗಳು ಭಾರತೀಯ ನಾಗರೀಕರಾಗಿರಬೇಕು. ಕನ್ನಡ ಭಾಷೆಯಲ್ಲಿ ಓದಲು, ಬರೆಯಲು, ಅರ್ಥೈಸಿಕೊಳ್ಳಲು ಮತ್ತು ನಿರರ್ಗಳವಾಗಿ ಮಾತನಾಡಲು ಬಲ್ಲವರಾಗಿರಬೇಕು. ಅರ್ಜಿ ಸಲ್ಲಿಸಿರುವುದನ್ನು ನೇಮಕಾತಿ ಹಕ್ಕೆಂದು ಪರಿಗಣಿಸಲಾಗುವುದಿಲ್ಲ.

(7) ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಪ್ರತ್ಯೇಕ ಶುಲ್ಕದೊಂದಿಗೆ ಅರ್ಜಿ ಸಲ್ಲಿಸುವುದು.

(8) ಅರ್ಜಿ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸುವುದಿಲ್ಲ.

(9) ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸದಸ್ಯ ಕಾರ್ಯದರ್ಶಿ
ಪ್ರಾಥಮಿಕ ಸಹಕಾರಿ ಕೃಷಿ ಮತ್ತು
ಗ್ರಾಮೀಣ ಅಭಿವೃದ್ಧಿ ಬ್ಯಾಂಕು ನಿ., ನೌಕರರ
ಸಾಮಾನ್ಯ ಶ್ರೇಣಿ ಸಮಿತಿ
ಬೆಂಗಳೂರು – 560 018.